



ರೀತಿಯಲ್ಲಿ ಗ್ರಹಿಸಲು ಪ್ರಯತ್ನಿಸುತ್ತದೆ. ತರೂರ್ ತಮ್ಮ ಕಥನದಲ್ಲಿ ಹೊಸ ಸಂಶೋಧನೆಯನ್ನು ಲೇಪಿಸುವುದಿಲ್ಲ, ಆದರೆ ಅವರ ವ್ಯಾಖ್ಯಾನದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ನಡುವಿದ್ದ ಮತಭೇದವನ್ನು ಮತ್ತು ಗಾಂಧಿಯ ನಂತರ ಭಾರತದ ರಾಜಕಾರಣದಲ್ಲಿ ಅಂಬೇಡ್ಕರ್ ಅವರ ವ್ಯಾಪಕ ಪಾತ್ರವನ್ನು ಚರ್ಚಿಸುತ್ತಾರೆ.

ಈ ಎಲ್ಲ ಪುಸ್ತಕಗಳ ನಡುವೆ ನಮಗೆ ದಕ್ಕಿರುವುದು ಸವಿತಾ ಅಂಬೇಡ್ಕರ್ ಅವರ ಪುಸ್ತಕ 'ಬಾಬಾಸಾಹೇಬ್ – ಮೈ ಲೈಫ್ ವಿತ್ ಅಂಬೇಡ್ಕರ್'. ಸವಿತಾ ಅಂಬೇಡ್ಕರ್ ಅವರ ಮೂಲ ಮರಾಠಿ ಪುಸ್ತಕ ಅನೇಕ ವರ್ಷಗಳ ಹಿಂದೆಯೇ ಬಂದಿದ್ದರೂ, ಅದರ ಇಂಗ್ಲಿಷ್ ಭಾಷಾಂತರ ಇತ್ತೀಚೆಗಷ್ಟೇ ಬಂದಿದೆ. ಗಾಂಧಿಗೂ ಅಂಬೇಡ್ಕರ್‌ಗೂ ಇರುವ ವ್ಯತ್ಯಾಸ ಇದೇ. ಗಾಂಧಿ ಸಾಹಿತ್ಯ ಸುಸಜ್ಜಿತವಾಗಿದೆ. ದಾಖಲೆಗಳು ಅನೇಕ ಜಾಗಗಳಲ್ಲಿ ಲಭ್ಯವಿವೆ. ಗಾಂಧಿಯ ಬಗ್ಗೆ ಏನಾದರೂ ಬರವಣಿಗೆಯಿದ್ದಲ್ಲಿ ಅದು ಆದಷ್ಟು ಬೇಗ ಭಾಷಾಂತರವೂ ಆಗುತ್ತದೆ. ಆದರೆ, ಅಂಬೇಡ್ಕರ್‌ಗೆ ಸಂಬಂಧಿಸಿದ ದಸ್ತಾವೇಜುಗಳು ಹರಿದು ಹಂಚಿಹೋಗಿವೆ; ಸಾಕಷ್ಟು ಅವರ ಅನುಯಾಯಿಗಳ ಖಾಸಗಿ ಸಂಗ್ರಹಗಳಲ್ಲಿವೆ. ಆದರೆ, ಅಂಬೇಡ್ಕರ್ ಅವರ ಪತ್ನಿಯ ನೆನಪುಗಳು 1990ರಷ್ಟು ಹಿಂದೆಯೇ ಪ್ರಕಟವಾಗಿದ್ದರೂ 32 ವರ್ಷಗಳ ಕಾಲ ಅದು ಇಂಗ್ಲೀಷಿಗೆ ಬಂದಿಲ್ಲ ಎಂದರೆ ಯಾರಿಗೂ ಆಶ್ಚರ್ಯವಾಗಲೇಬೇಕು. ಕಳೆದ ವರ್ಷ ನದೀಮ್ ಖಾನ್ ಅವರ ಅನುವಾದ ಪ್ರಕಟಗೊಂಡಿದೆ. ಅಶೋಕ್ ಗೋಪಾಲ್, ರಾಥೋರ್, ತರೂರ್ ಈ ಎಲ್ಲರ ಪುಸ್ತಕದಲ್ಲಿ ಇಲ್ಲದ, ಮಹತ್ವದ ಮತ್ತು ಖಾಸಗಿ ವಿವರಗಳು ಸವಿತಾರ ಪುಸ್ತಕದಲ್ಲಿ ಲಭಿಸುತ್ತವೆ. ಅಂಬೇಡ್ಕರ್ ಅವರ ಹೋರಾಟ, ಅಧ್ಯಯನಗಳ ಬಗ್ಗೆ ಇತರ ಪುಸ್ತಕಗಳು ಹೇಳಿದರೆ, ಸವಿತಾರ ಪುಸ್ತಕ ಅವರ ಖಾಸಗಿ ಜೀವನ, ಆವರ ಆಸಕ್ತಿ ಮತ್ತು ಸಂವಿಧಾನ ರಚನೆಯ ಸಮಯದ ತುಮುಲಗಳು, ನಂತರದ ರಾಜಕೀಯ, ಆರೋಗ್ಯ, ಪ್ರೀತಿ, ಹಿಂದೂ ಧರ್ಮದ ಪರಿತ್ಯಾಗ ಮತ್ತು ಬೌದ್ಧಧರ್ಮವನ್ನು ಅಪ್ಪುವ ಸಂದರ್ಭಗಳನ್ನು ದಾಖಲಿಸುತ್ತದೆ.

ಅಂಬೇಡ್ಕರ್ ಅವರನ್ನು ಒಂದು ಪ್ರತೀಕದಂತೆ, ದಲಿತರ ನಾಯಕರಂತೆ, ವಿಚಾರಧಾರೆಯ ಪ್ರವರ್ತಕರಂತೆ ಕಾಣುತ್ತಿರುವ ಸಮಯದಲ್ಲಿ ಎಲ್ಲ ರೀತಿಯ ಅಭದ್ರತೆಗಳುಳ್ಳ ಮಾನವನಾಗಿ ಈ ಪುಸ್ತಕ ಚಿತ್ರಿಸುತ್ತದೆ. ಹೀಗಾಗಿ ನಮಗೆ ಅಂಬೇಡ್ಕರ್ ಒಬ್ಬ ವ್ಯಕ್ತಿಯಾಗಿ ದಕ್ಕುತ್ತಾರೆ.

ಅಂಬೇಡ್ಕರ್ ಪ್ರಖರ ಮೇಧಾವಿ ಆಗಿದ್ದರು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಸಣ್ಣ ವಯಸ್ಸಿಗೆ ಅರ್ಥಶಾಸ್ತ್ರದಲ್ಲಿ ಎರಡು ಡಾಕ್ಟರೇಟುಗಳು, ಸಂಸ್ಕೃತ-ಪಾರ್ಸಿ ಭಾಷೆಗಳ ಕಲಿಕೆ, ಕಾನೂನಿನ ವ್ಯಾಸಂಗ ಮತ್ತು ವಕೀಲ ವೃತ್ತಿ. ಕಾಲೇಜಿನಲ್ಲಿ ಬೋಧಕರಾಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಕೆಲಸ, ಐವತ್ತು ಸಾವಿರಕ್ಕೂ ಹೆಚ್ಚಿನ ಪುಸ್ತಕ ಸಂಗ್ರಹ ಮತ್ತು ಓದು – ಈ ಎಲ್ಲವೂ ಸಾಮಾನ್ಯದ ಮಾತುಗಳಲ್ಲ. ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ – "ನನ್ನ ಪುಸ್ತಕಗಳೇ ನನ್ನ ಸಹಯಾತ್ರಿಗಳು. ನನ್ನ ಹೆಂಡತಿ ಮಕ್ಕಳಿಗೂ ಮೀರಿ ಪ್ರಿಯವಾದುವು". ಇಷ್ಟೆಲ್ಲಾ ಓದುತ್ತಾ, ನಿರಂತರ ಬರವಣಿಗೆಯಲ್ಲಿ ತೊಡಗಿದ್ದ ಅಂಬೇಡ್ಕರ್ ಸವಿತಾರನ್ನು ಮದುವೆಯಾಗಲು ಅಥವಾ ಸವಿತಾ ಅಂಬೇಡ್ಕರರನ್ನು ಮದುವೆಯಾಗುವುದಕ್ಕೆ ಒಪ್ಪಲು ಕಾರಣ ಅವರ ಅನಾರೋಗ್ಯವೇ ಆಗಿತ್ತು. ಶಾರದಾ ಕಬೀರ್ ಎನ್ನುವ ವಿವಾಹಪೂರ್ವ ಹೆಸರನ್ನು ಹೊತ್ತ ಸವಿತಾ ವೃತ್ತಿಯಿಂದ ವೈದ್ಯರು. ಆಕೆಗೆ ಅಂಬೇಡ್ಕರ್ ಬಗೆಗೆ ಇದ್ದ ಅಭಿಮಾನ ಗೌರವಗಳಿಂದಾಗಿ ಅವರ ಶುಶ್ರೂಷೆಗೆಂದು, ಅವರ ಆರೋಗ್ಯವನ್ನು ಕಾಪಾಡಲೆಂದೇ ಮದುವೆಗೆ ಒಪ್ಪುತ್ತಾರೆ. ಸವಿತಾರ ಪುಸ್ತಕದಿಂದ ನಮಗೆ ಕಾಣುವುದು ಸಾಮಾನ್ಯ ದೌರ್ಬಲ್ಯಗಳು, ಆಸೆ ಆಕಾಂಕ್ಷೆಗಳಿರುವ ಮಾನವ. ಗಾಂಧಿ ತಮ್ಮ ಜೀವನವನ್ನು ತೆರೆದ ಪುಸ್ತಕವನ್ನಾಗಿ, ತಮ್ಮ ವಿರೋಧಾಭಾಸಗಳನ್ನು ಜೀವಿಸುತ್ತಿದ್ದರೆ, ಅಂಬೇಡ್ಕರ್‌ಗೆ ಅದು ನಿಜಕ್ಕೂ ಸಾಧ್ಯವಾಗದ ಮಾತಾಗಿತ್ತು. ದಲಿತ-ವಂಚಿತರ ನಾಯಕರಾಗಿ, ಅವರ ಹಕ್ಕುಗಳನ್ನು ಕಾಪಾಡುವ ವ್ಯಕ್ತಿಯಾಗಿ ತಮ್ಮ ದೌರ್ಬಲ್ಯಗಳನ್ನು ತೋರಿಸಿಕೊಳ್ಳುವುದು ಶಕ್ಯವಿರಲಿಲ್ಲ. ಆದರೆ, ಸವಿತಾರ ಪುಸ್ತಕದಲ್ಲಿ ನಮಗೆ ಕಾಣುವುದು ಆಕೆಗೆ ಪ್ರೇಮಪತ್ರಗಳನ್ನು ಬರೆಯುವ, ಆಕೆ ಸಿಂಗಾರ